ಓ.ಎಸ್. 52/2021

ಪಿ.ಡಬ್ಲ್ಯೂ-1

ದಿನಾಂಕಃ **24.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಆರ್.ಡಿ. ವಕೀಲರಿಂದಃ

**5.** ನನ್ನ ತಾತನ ಹೆಸರು ದೊಡ್ಡಭೈರೇಗೌಡ. ಪ್ರತಿವಾದಿಯ ತಾತ ಚಿಕ್ಕಭೈರೇಗೌಡ ಮತ್ತು ನನ್ನ ತಾತ ದೊಡ್ಡಭೈರೇಗೌಡ ಅಣ್ಣ-ತಮ್ಮಂದಿರು ಎಂದರೆ ಸರಿ. ನಿಪಿ-5 ನ್ನು ದಿಃ04.03.2008 ರಂದು ತಾಲ್ಲೂಕು ಕಛೇರಿಯ ಹತ್ತಿರ ತಯಾರಿಸಿರುತ್ತಾರೆ ಆಗ ನಾನು, ಪ್ರತಿವಾದಿ, ಚಂದ್ರಪ್ಪ, ಶ್ರೀಧರ್ ಮತ್ತು ಪತ್ರ ಬರಹಗಾರರು ಹಾಜರಿದ್ದೆವು . ಸಾಕ್ಷಿ ಮುಂದುವರೆದು ಶ್ರೀಧರ್ ಮತ್ತು ಪತ್ರ ಬರಹಗಾರರು ಈಗ ಜೀವಂತವಾಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ದಿನದಂದು ತಾಲ್ಲೂಕು ಕಛೇರಿಯ ಹತ್ತಿರ ಹಲವಾರು ಜನ ಇದ್ದರು ಎಂದರೆ ಸರಿ. ಆದರೆ ಅವರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪತ್ರ ಬರೆಯುವಾಗ ಇದ್ದಂತಹ ಸಾಕ್ಷಿ ಚಂದ್ರಪ್ಪ ಸಿದ್ದಾಪುರ ಗ್ರಾಮಸ್ಥರು. ಸಾಕ್ಷಿ ಶ್ರೀಧರ್ ಕಂಬತ್ತನಹಳ್ಳಿ ಗ್ರಾಮಸ್ಥರು. ನಿಪಿ-5 ರಲ್ಲಿ ಸಾಕ್ಷಿದಾರರ ತಂದೆಯ ಹೆಸರು ಮತ್ತು ವಿಳಾಸ ನಮೂದು ಮಾಡಿರುವುದಿಲ್ಲ ಎಂದರೆ ಸರಿ.

**6.** ದಾವಾ ಸ್ವತ್ತು ಪ್ರತಿವಾದಿಯ ತಂದೆಯ ಆಸ್ತಿ ಎಂದರೆ ಸರಿ. ಪ್ರತಿವಾದಿಯ ತಂದೆ ತೀರಿಕೊಂಡ ನಂತರ ಪ್ರತಿವಾದಿ ಅವರ ತಾಯಿಯ ವಿರುದ್ಧ ದಾವೆ ಹೂಡಿ ದಾವಾ ಸ್ವತ್ತನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ರಲ್ಲಿ ನಮೂದು ಮಾಡಿರುವ ಆಸ್ತಿಗಳಲ್ಲಿ ಪ್ರತಿವಾದಿಯ ಮಕ್ಕಳಿಗೂ ಸಹ ಹಕ್ಕು ಇರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರ ಎಲ್ಲರ ಒಪ್ಪಿಗೆಯ ಮೇರೆ ಬರೆದುಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಿಪಿ-5 ರಲ್ಲಿ ಪ್ರತಿವಾದಿಯ ಮಕ್ಕಳು ಸಹಿ ಮಾಡಿರುವುದಿಲ್ಲ . ನಿಪಿ-5 ರಲ್ಲಿ ನಿಪಿ-5 ಕ್ಕೆ ಪ್ರತಿವಾದಿಯ

ಮಕ್ಕಳ ಒಪ್ಪಿಗೆ ಇರುತ್ತದೆ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯ ಮಕ್ಕಳು ಪ್ರಾಪ್ತ ವಯಸ್ಕರಾಗಿರುತ್ತಾರೆ ಎಂದರೆ ಸರಿ.

**7.** ನಿಪಿ-5 ಕ್ಕೆ ಪ್ರತಿವಾದಿ ಸಹಿ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಿಪಿ-5 ರಲ್ಲಿರುವ ಸಹಿ ಪ್ರತಿವಾದಿಯ ಸಹಿ ಆಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ನಿಪಿ5 ನ್ನು ಸೃಷ್ಟಿ ಮಾಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

**8.** ನಮ್ಮ ಗ್ರಾಮ ಮಧುಗಿರಿ ನಗರ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. 2008 ರಲ್ಲಿ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ 1 ಗುಂಟೆಗೆ ರೂ. 1,50,000-2,00,000 ಇತ್ತು ಎಂದು ಸೂಚಿಸುವುದು ಸರಿಯಲ್ಲ. ಪ್ರಸ್ತುತ ದಾವಾ ಸ್ವತ್ತಿನ 1 ಗುಂಟೆ ಬೆಲೆ ರೂ. 2,50,000-3,00,000 ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ